## ಸಿನಿನಿರ್ದೇಶಕ ಸೂರಿ ಸಂದರ್ಶನ

# ಬಿರಿಯಾನಿ ಸ್ಪೆಷಲಿಸ್ಟ್!



ಚಿತ್ರಗಳು: ಆನಂದ ಬಕ್ಷಿ

ಸಮಕಾಲೀನ ಕನ್ನಡ ಸಿನಿಮಾ ನಿರ್ದೇಶಕರಲ್ಲಿ ಪ್ರಮುಖ ಹೆಸರು ಸೂರಿ. ನಗರಪ್ರದೇಶಗಳಲ್ಲಿನ, ಅದರಲ್ಲೂ ಕೊಳೇಗೇರಿಗಳಲ್ಲಿನ ಜನರ ಬದುಕಿನಲ್ಲಿ ಹಾಸುಹೊಕ್ಕಾದ ಹಿಂಸೆಯ ಮೂಲಕ ಬದುಕಿನ ಸತ್ಯಗಳನ್ನು ಅನಾವರಣಗೊಳಿಸುವುದರಲ್ಲಿ ಅವರು ಸಿದ್ಧಹಸ್ತರು. ಸಿನಿಮಾ ಕಟ್ಟುವ ಕ್ರಮದಲ್ಲಿ ಹಾಗೂ ಸಿನಿಮಾ ಬರವಣಿಗೆಯಲ್ಲಿ ಅವರದು ಅನನ್ಯ ಶೈಲಿ. ಹನ್ನೊಂದು ವರ್ಷಗಳ ಅವಧಿಯಲ್ಲಿ ರೂಪಿಸಿದ ಒಂಬತ್ತು ಚಿತ್ರಗಳಲ್ಲಿ, ಎರಡು ಸಿನಿಮಾಗಳ (‘ದುನಿಯಾ’ ಮತ್ತು ‘ಜಂಗ್ಲಿ’) ಚಿತ್ರಕಥೆಗೆ ರಾಜ್ಯಪ್ರಶಸ್ತಿ ಪಡೆದ ಹಿರಿಮೆ ಅವರದು. ‘ಇಂತಿ ನಿನ್ನ ಪ್ರೀತಿಯ’, ‘ಜಾಕಿ’, ‘ಅಣ್ಣಾ ಬಾಂಡ್’, ‘ಕಡ್ಡಿಪುಡಿ’, ‘ಕೆಂಡಸಂಪಿಗೆ’, ‘ದೊಡ್ಮನೆ ಹುಡುಗ’ ಹಾಗೂ ‘ಟಗರು’ ಅವರ ನಿರ್ದೇಶನದ ಉಳಿದ ಚಿತ್ರಗಳು. ಕುಂಚ ಹಿಡಿದು ಚಿತ್ರಗಳನ್ನೂ ಬಿಡಿಸಬಲ್ಲ ಸೂರಿ ನಿರಂತರ ಸೃಜನಶೀಲ ಚಡಪಡಿಕೆಗೆ ತಮ್ಮನ್ನು ತೆತ್ತುಕೊಂಡವರು. ಅವರೊಂದಿಗಿನ ಈ ಮಾತುಕತೆ ವಿಶಿಷ್ಟ ವ್ಯಕ್ತಿತ್ವದ ಪರಿಚಯದ ಜೊತೆಗೆ ‘ಕಲೆ ಕಟ್ಟುವಿಕೆ’ಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಚರ್ಚಿಸುತ್ತದೆ. ಈ ಸಂದರ್ಶನ ಮಾಡಿದವರು–

**ರಘುನಾಥ ಚ.ಹ., ಪದ್ಮನಾಭ ಭಟ್**